# ಬಹದ್ದೂರ್‌ಗೆ ಶಕ್ತಿಮದ್ದು!



ವರಮಹಾಲಕ್ಷ್ಮಿ ಹಬ್ಬಕ್ಕೆ ಆಡಿಯೊ. ಗೌರಿ–ಗಣೇಶನ ಸಂದರ್ಭದಲ್ಲಿ ಬೆಳ್ಳಿತೆರೆಗೆ. ಇದು 'ಬಹದ್ದೂರ್' ಚಿತ್ರದ ನಿರ್ಮಾಪಕರ ಲೆಕ್ಕಾಚಾರ. ತಮ್ಮ ಸಿನಿಮಾ ಇಪ್ಪತ್ತೈದು ವಾರ ಪ್ರದರ್ಶನ ಕಾಣುವುದು ಗ್ಯಾರಂಟಿ ಎನ್ನುವುದು ಅವರ ಲೆಕ್ಕಾಚಾರದ ಮತ್ತೊಂದು ಸಂಗತಿ.

'ಬಹದ್ದೂರ್' ಧ್ರುವ ಸರ್ಜಾ ಅಭಿನಯದ ಸಿನಿಮಾ. ಧ್ರುವ ನಾಯಕನಾಗಿ ಅಭಿನಯಿಸಿದ ಚೊಚ್ಚಿಲ ಚಿತ್ರ 'ಅದ್ದೂರಿ' ಬಹುದೊಡ್ಡ ಯಶಸ್ಸನ್ನು ಕಂಡಿತ್ತು. ಆದರೆ, 'ಅದ್ದೂರಿ'ಯ ಬೆನ್ನಿಗೆ ಸೆಟ್ಟೇರಿದ 'ಬಹದ್ದೂರ್' ಸಿನಿಮಾ ಕುಂಟುತ್ತಾ ತಯಾರಾಗುತ್ತಿದೆ. ಇದೀಗ ಸಿನಿಮಾದ ಸೂತ್ರಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿರುವ ನಿರ್ಮಾಪಕ ಕನಕಪುರ ಶ್ರೀನಿವಾಸ್, 'ಬಹದ್ದೂರ್'ನನ್ನು ಅದ್ದೂರಿಯಾಗಿ ತೆರೆ ಕಾಣಿಸುವ ಪ್ರಯತ್ನದಲ್ಲಿದ್ದಾರೆ. ಈ ಪ್ರಯತ್ನದ ಭಾಗವಾಗಿಯೇ ಅವರು ಗೀತೆಗಳ ಧ್ವನಿಮುದ್ರಿಕೆ ಹಾಗೂ ಸಿನಿಮಾವನ್ನು ತೆರೆಕಾಣಿಸುವ ದಿನಾಂಕಗಳನ್ನು ನಿಗದಿಪಡಿಸಿದ್ದಾರೆ.

'ಬಹದ್ದೂರ್'ನ ನಿರ್ದೇಶನ ಚೇತನ್ ಕುಮಾರ್ ಅವರದ್ದು. ಈ ಸಿನಿಮಾ ರೂಪುಗೊಳ್ಳಲು ಎರಡು ವರ್ಷಗಳಷ್ಟು ದೀರ್ಘ ಸಮಯ ಹಿಡಿದರೂ ನಿರ್ಮಾಣದಲ್ಲಿ ಯಾವುದೇ ರಾಜಿ ಮಾಡಿಕೊಂಡಿಲ್ಲ ಎನ್ನುವುದು ಅವರಿಗೆ ಸಮಾಧಾನ ತಂದಿದೆ. ನಿರ್ದೇಶಕರ ಬದ್ಧತೆ ನಿರ್ಮಾಪಕರಿಗೂ ಇಷ್ಟವಾಗಿದೆ. 'ಚೇತನ್ ಮತ್ತು ಧ್ರುವ ಅವರು ಅತೀವ ಶ್ರದ್ಧೆಯಿಂದ ಕೆಲಸ ಮಾಡಿದ್ದಾರೆ. ಸಿನಿಮಾ ಕುರಿತ ಅವರ ಬದ್ಧತೆಯನ್ನು ನಾನು ಗೌರವಿಸುತ್ತೇನೆ. ಸಿನಿಮಾ ಗೆಲ್ಲುವ ಬಗ್ಗೆ ನನಗಂತೂ ಯಾವುದೇ ಅನುಮಾನವಿಲ್ಲ' ಎನ್ನುವುದು ನಿರ್ಮಾಪಕರ ವಿಶ್ವಾಸ.

ಅಂದಹಾಗೆ, ಧ್ರುವ ಅವರಿಗೆ ಎರಡನೇ ಚಿತ್ರದಲ್ಲೂ ರಾಧಿಕಾ ಪಂಡಿತ್ ಅವರೇ ನಾಯಕಿ. ಸದ್ಯಕ್ಕೆ 'ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ ಚಿತ್ರ'ದ ಶೂಟಿಂಗ್‌ನಲ್ಲಿ ತೊಡಗಿಕೊಂಡಿರುವ ರಾಧಿಕಾ ಅವರಿಗೆ 'ಬಹದ್ದೂರ್' ಬಹುನಿರೀಕ್ಷೆಯ ಸಿನಿಮಾ. ಪ್ರಸ್ತುತ ಅವಕಾಶಗಳ ಮಟ್ಟಿಗೆ ಮಂಕಾಗಿರುವ ರಾಧಿಕಾ ಅವರಿಗೆ 'ಬಹದ್ದೂರ್' ಗೆದ್ದರೆ ಟಾನಿಕ್‌ನಂತೆ ಪರಿಣಮಿಸಬಹುದು.



# ಖುಷಿಯಲಿ, ಭಯದಲಿ...

'ಖುಷಿಯಾಗುತ್ತಿದೆ, ಭಯವೂ ಜೊತೆಗಿದೆ' ಎಂದರು ಶರಣ್. ಅಧ್ಯಕ್ಷ ಪೀಠದಲ್ಲಿ ಕುಳಿತೇ ಅವರು ಈ ಖುಷಿ–ಭಯವನ್ನು ಹಂಚಿಕೊಂಡರು. ಅಂದ ಹಾಗೆ, ಶರಣ್‌ರ ಅಧ್ಯಕ್ಷ ಪೀಠಕ್ಕೆ ಸದ್ಯಕ್ಕಂತೂ ಕುತ್ತಿಲ್ಲ. ಯಾಕೆಂದರೆ ಸಿನಿಮಾದ ಹೆಸರೇ 'ಅಧ್ಯಕ್ಷ'!

'ಸಿನಿಮಾದ ಹಾಡುಗಳು ಈಗಾಗಲೇ ಜನಪ್ರಿಯತೆ ಗಳಿಸಿವೆ. ವಿಕ್ಟರಿ ಸಿನಿಮಾದ ತಂಡ ಈ ಚಿತ್ರದಲ್ಲೂ ಕೆಲಸ ಮಾಡಿದೆ. ಇವೆರಡು ಶರಣ್‌ರ ಖುಷಿಗೆ ಕಾರಣಗಳು. ಇನ್ನು ಸಿನಿಮಾ ತೆರೆ ಕಾಣುವ ಸಂದರ್ಭದಲ್ಲಿ, ಅದರ ಫಲಿತಾಂಶಕ್ಕೆ ಸಂಬಂಧಿಸಿದಂತೆ ಯಾರನ್ನಾದರೂ ಭಯ ಕಾಡುವುದು ಸಹಜ. ಅಲ್ಲದೆ, ಶರಣ್‌ರ ಇತ್ತೀಚಿನ ಚಿತ್ರ 'ಜಯಲಲಿತಾ' ಹೇಳಿಕೊಳ್ಳುವ ಯಶಸ್ಸನ್ನೇನೂ ಗಳಿಸಿಲ್ಲ. ಆದರೆ, ಅರ್ಜುನ್ ಜನ್ಯ ಸಂಗೀತ ನಿರ್ದೇಶನದ 'ಅಧ್ಯಕ್ಷ' ಚಿತ್ರದ ಗೀತೆಗಳು ದೊಡ್ಡಮಟ್ಟದಲ್ಲಿ ಜನಪ್ರಿಯತೆ ಗಳಿಸಿರುವುದು ಚಿತ್ರತಂಡದಲ್ಲಿ ಗೆಲುವಿನ ನಿರೀಕ್ಷೆಗಳನ್ನು ಹುಟ್ಟಿಸಿದೆ.

ನಂದಕಿಶೋರ್ ನಿರ್ದೇಶನದ 'ಅಧ್ಯಕ್ಷ' ತಮಿಳು ಚಿತ್ರವೊಂದರ ರೀಮೇಕ್. 'ಸಿನಿಮಾ ಚೆನ್ನಾಗಿ ಬಂದಿದೆ. ಇದರ ಯಶಸ್ಸು ಇಡೀ ತಂಡಕ್ಕೆ ಸಲ್ಲಬೇಕು' ಎನ್ನುವ ವಿನಯ ನಿರ್ದೇಶಕರದ್ದು. 'ರೀಮೇಕ್ ಚಿತ್ರವೊಂದನ್ನು ಎಷ್ಟು ಚೆನ್ನಾಗಿ ಮಾಡಬಹುದು ಎನ್ನುವುದನ್ನು ಈ ಸಿನಿಮಾದಲ್ಲಿ ಮಾಡಿ ತೋರಿಸಿದ್ದೇವೆ' ಎಂದು ನಂದಕಿಶೋರ್ ಆತ್ಮವಿಶ್ವಾಸದಿಂದ ಹೇಳಿದರು.

ಆಗಸ್ಟ್ ಎರಡನೇ ವಾರದಲ್ಲಿ 'ಅಧ್ಯಕ್ಷ' ಚಿತ್ರವನ್ನು ತೆರೆ ಕಾಣಿಸುವ ಪ್ರಯತ್ನದಲ್ಲಿ ನಿರ್ಮಾಪಕರಾದ ಗಂಗಾಧರ್ ಮತ್ತು ಬಸವರಾಜ್ ತೊಡಗಿಕೊಂಡಿದ್ದಾರೆ.

■ ರಘು